<u>ಅಸಲು ದಾವಾ ಸಂಖ್ಯೆ:**-65/2020**</u> ಪಿ.ಡಬ್ಲ್ಯೂ:- **1**

ದಿನಾಂಕಃ **17-11-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ಪ್ರತಿವಾದಿಯ ಹತ್ತಿರ ದಾವಾ ಆಸ್ತಿಯ ಖರೀದಿಯ ಬಗ್ಗೆ ಮಾತನಾಡಲು ಬೆಳಗ್ಗೆ 10 ರಿಂದ 11 ಗಂಟೆ ಸಮಯದಲ್ಲಿ ಹೋಗಿದ್ದೆವು. ಸದರಿ ದಿನದಂದು ನಾನು ವಾಸವಾಗಿರುವ ಕುಳಗಟ್ಟೆ ಗ್ರಾಮದಿಂದ ಪ್ರತಿವಾದಿಯ ಮನೆಯಾದ ಸಾಸ್ವೇಹಳ್ಳಿ ಗೆ ಹೋಗಿದ್ದೆನು. ಸದರಿ ದಿನದಂದು ನಾನು, ನನ್ನ ಯಜಮಾನರಾದ ತಿಪ್ಪೇಶ, ಚನ್ನಕೇವಶ ಮತ್ತು ಹರಿಯಪ್ಪರವರು ಹೋಗಿದ್ದೆವು. ಸದರಿ ದಿನದಂದು ಪ್ರತಿವಾದಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ನನಗೆ ತೋರಿಸಿರುವುದಿಲ್ಲ. ನಾನು ಮತ್ತು ನನ್ನ ಯಜಮಾನರು ಪ್ರತಿವಾದಿಯ ಮನೆಗೆ ಹೋಗುವ 1 ವಾರದ ಪೂರ್ವದಲ್ಲಿ ದಾವಾ ಆಸ್ತಿಯನ್ನು ನೋಡಿದ್ದೆವು. ಸದರಿ ಸಮಯದಲ್ಲಿ ನಾವು ದಾವಾ ಆಸ್ತಿಯನ್ನು ಅಳತೆ ಮಾಡಿ ನೋಡಿರುವುದಿಲ್ಲ. ಸದರಿ ಸಮಯದಲ್ಲಿ ದಾವಾ ಆಸ್ತಿಯಲ್ಲಿ ಗಿಡಗೆಂಟೆಗಳು ಬೆಳೆದಿದ್ದವು. ದಾವಾ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ರಂಗೋಜಿರಾವ್ ಜಮೀನು, ಪಶ್ಚಿಮಕ್ಕೆ ಬಸಮ್ಮರವರು ಜಮೀನು, ಉತ್ತರಕ್ಕೆ ಕೆ ಕೆ ರೂಪ ಮತ್ತು ಕೆ ಕೆ ರಸ್ತೆ, ದಕ್ಷಿಣಕ್ಕೆ ತುಂಗಾಭದ್ರಾ ನದಿ. ಸದರಿ ದಿನದಂದು ನಾವು ನೋಡಿದ ಆಸ್ತಿಯನ್ನೇ ನಾವು ಖರೀದಿ ಮಾಡಿದ್ದೆವು. ಸದರಿ ಮಾತುಕತೆಯ ದಿನದಂದು ದಾವಾ ಆಸ್ತಿಗೆ ಒಟ್ಟು ಮೊಬಲಗು ರೂ.3,40,000/- ಕ್ಕೆ ಮಾತುಕತೆಯಾಗಿರುತ್ತದೆ. ಸದರಿ ದಿನದಂದು ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಹಣವನ್ನು ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರ ಆಗಿರುವುದಿಲ್ಲ. ಸದರಿ ದಿನದಂದು ಯಾವುದೇ ಬರವಣಿಗೆಯೂ ಸಹ ಆಗಿರುವುದಿಲ್ಲ. ಮಾತುಕತೆಯಾದ 15 ದಿನಗಳ ನಂತರ ಕ್ರಯದ ಕರಾರು ಪತ್ರವನ್ನು

ನೋಂದಣಿ ಮಾಡಿಸಲು ಹೊನ್ನಾಳಿ ಉಪನೋಂದಣಿ ಕಚೇರಿಯಲ್ಲಿ ಪ್ರತಿವಾದಿಯನ್ನು ಭೇಟಿ ಮಾಡಿರುತ್ತೇನೆ. ದಿಃ 04-12-2018 ರಂದು ಹೊನ್ನಾಳಿ ಉಪನೋಂದಣಿ ಕಚೇರಿಗೆ ನೋಂದಣಿ ಮಾಡಿಸಲು ಹೋಗಿದ್ದೆವು. ಸದರಿ ದಿನದಂದು ನಾವು ನೇರವಾಗಿ ಉಪನೋಂದಣಿ ಕಚೇರಿಗೆ ಹೋಗಿದ್ದೆವು. ಉಪನೋಂದಣಿ ಕಚೇರಿಗೆ ಮೊದಲು ನಾನು ಹೋಗಿದ್ದು ತದನಂತರ ಪ್ರತಿವಾದಿ ಬಂದಿರುತ್ತಾರೆ. ಸದರಿ ದಿನದಂದು ನಾನು, ನನ್ನ ಯಜಮಾನರು, ಪ್ರತಿವಾದಿ ಮತ್ತು ಶಂಕ್ರಪ್ಪರವರು ಕ್ರಯದ ಕರಾರು ಪತ್ರವನ್ನು ತಯಾರು ಮಾಡಲು ಬರವಣಿಗೆಗಾರರ ಹತ್ತಿರ ಹೋಗಿದ್ದೆವು. ಬರವಣಿಗೆಗಾರರಿಗೆ ಕ್ರಯದ ಕರಾರು ಪತ್ರವನ್ನು ತಯಾರು ಮಾಡಿಕೊಡುವಂತೆ ನಾನು ತಿಳಿಸಿದ್ದೆನು. ಸದರಿ ಸಮಯದಲ್ಲಿ ಬರವಣಿಗೆಗಾರರಿಗೆ ಯಾವುದೇ ದಾಖಲಾತಿಗಳನ್ನು ಕೊಟ್ಟಿರುವುದಿಲ್ಲ. ಬರವಣಿಗೆಗಾರರು ಮೊದಲಿಗೆ ಬರೆದುಕೊಂಡು ನಂತರ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಕೊಟ್ಟಿರುತ್ತಾರೆ. ನಮ್ಮ ಯಜಮಾನರು ಛಾಪಾಕಾಗದವನ್ನು ತಂದಿರುತ್ತಾರೆ. ನಮ್ಮ ಯಜಮಾನರು ಛಾಪಾಕಾಗದವನ್ನು ತೆಗೆದುಕೊಂಡು ಬಂದಿರುತ್ತಾರೆ ಆದರ ಕಾರಣ ಎಲ್ಲಿಂದ ತೆಗೆದುಕೊಂಡು ಬಂದಿರುತ್ತಾರೆ ಎಂದು ಅವರಿಗೆ ಗೊತ್ತು. ಸದರಿ ಛಾಪಾಕಾಗದದ ಮೌಲ್ಯ ಎಷ್ಟು ಎಂದು ನನಗೆ ಗೊತ್ತಿಲ್ಲ. ಸದರಿ ಛಾಪಾಕಾಗದವು 2 ಹಾಳೆ ಇರುತ್ತದೆ. ಸದರಿ ಕರಾರು ಪತ್ರಕ್ಕೆ ನಾನು ಎಷ್ಟು  ಸಹಿಗಳನ್ನು ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಸದರಿ ಛಾಪಾಕಾಗದವನ್ನು ಮೊದಲನೇ ಪಕ್ಷಗಾರರು ವಾದಿ ಎಂದು ಮತ್ತು 2 ನೇ ಪಕ್ಷಗಾರರು ಪ್ರತಿವಾದಿ ಎಂದು ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ದಿನದಂದು ಛಾಪಾಕಾಗದವನ್ನು ಖರೀದಿ ಮಾಡಲು ಹಣವನ್ನು ನಾನೇ ಕೊಟ್ಟಿದ್ದೇನೆ ಎಂದರೆ ಸರಿ. ಸಾಕ್ಷಿಗೆ ದಿಃ 04-12-2018 ರ ಕ್ರಯ ಕರಾರು ಪತ್ರದ ನಕಲನ್ನು ತೋರಿಸಿ ಸದರಿ ದಾಖಲೆಯು ಪ್ರತಿವಾದಿಯು ನಿಮಗೆ ಬರೆದುಕೊಟ್ಟಂತಹ ಕ್ರಯದ ಕರಾರು ಪತ್ರ ಮತ್ತು ಸದರಿ ಕ್ರಯದ ಕರಾರು ಪತ್ರದಲ್ಲಿರುವ ಕ್ರಯಕ್ಕೆ ಪಡೆದವರ ಸಹಿ ನಿಮ್ಮ ಸಹಿ ಎಂಬ ಪ್ರಶ್ನೆಗೆ ಸಾಕ್ಷಿಯು ಸರಿ ಎಂದು ಒಪ್ಪಿಕೊಂಡಿದ್ದು ಸದರಿ ಕ್ರಯದ ಕರಾರು ಪತ್ರವನ್ನು ನಿಡಿ-1 ಎಂದು, ಸಾಕ್ಷಿಯ ಸಹಿಯನ್ನು ನಿಡಿ-1(ಎ) ಎಂದು ವಾದಿಯ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.  ನಿಪಿ-1 ಶುದ್ದ ಕ್ರಯ ಪತ್ರವನ್ನು ನಾನೇ ನ್ಯಾಯಾಲಯಕ್ಕ

ಹಾಜರುಪಡಿಸಿದ್ದೇನೆ. ಸದರಿ ನಿಪಿ-1 ರಲ್ಲಿರುವ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಶುದ್ದ ಕ್ರಯ ಪತ್ರವನ್ನು ದಿಃ 04-12-2018 ರಂದು ಬೆರಳಚ್ಚು ಮಾಡಿಸಿರುತ್ತೇವೆ. ನಿಪಿ-1 ಮತ್ತು ನಿಡಿ-1 ರ ದಾಖಲೆಯಲ್ಲಿ ನಮೂದಾಗಿರುವ ಆಸ್ತಿ, ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂಧಿ ಒಂದೇ ಎಂದರೆ ಸರಿ. ನಿಡಿ-1 ರಲ್ಲಿ ಸಹ ಪ್ರತಿವಾದಿ ಸಹಿಯನ್ನು ಮಾಡಿದ್ದಾರೆ ಎಂದರೆ ಸರಿ. ನಿಪಿ-1 ರಲ್ಲಿ ಕ್ರಯದ ಮೊಬಲಗು ರೂ.3,40,000/- ಎಂದು ನಮೂದಾಗಿದೆ ಎಂದರೆ ಸರಿ. ನಿಡಿ-1 ರಲ್ಲಿ ಕ್ರಯದ ಮೊಬಲಗು ರೂ.45,25,000/- ಎಂದು ನಮೂದಾಗಿದೆ ಎಂದರೆ ಸರಿ. ನಿಡಿ-1 ದಾಖಲೆಯ ಪ್ರಕಾರ ನೀವು ಪ್ರತಿವಾದಿಗೆ ರೂ.3,00,000/- ಹಣವನ್ನು ಚಕ್ಕಿನ ಮೂಲಕ ಮತ್ತು ರೂ.12,00,000/- ಹಣವನ್ನು ನಗದು ರೂಪದಲ್ಲಿ ಒಟ್ಟು ರೂ.15,00,000/- ಕೊಟ್ಟಿದ್ದೀರಿ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರಿಸಿದ್ದು ತದನಂತರ ನಾವು ನಿಪಿ-1 ರ ಪ್ರಕಾರ ರೂ.3,00,000/- ಹಣವನ್ನು ಮಾತ್ರ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಿಪಿ-1 ಶುದ್ದ ಕ್ರಯ ಪತ್ರದಲ್ಲಿ ದಾವಾ ಆಸ್ತಿಯ ಚಕ್ಕುಬಂಧಿಯನ್ನು ಉತ್ತಕ್ಕೆ ಕೆ ಕೆ ರಸ್ತೆ, ದಕ್ಷಿಣಕ್ಕೆ ತುಂಗಭದ್ರಾ ನದಿ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-1 ರಲ್ಲಿರುವ ಆಸ್ತಿಯು ಕೆ ಕೆ ರಸ್ತೆ ಮತ್ತು ತುಂಗಭದ್ರಾ ನದಿಯ ಮಧ್ಯದಲ್ಲಿ ಬರುವ ಆಸ್ತಿ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.